ಅ) ವಿದ್ಯಾಭ್ಯಾಸಕ್ಕೆ ತಕ್ಕಂತೆ ಹುದ್ದೆಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಮೃತ ಸರ್ಕಾರಿ ನೌಕರರ ಕುಟುಂಬದವರಿಗೆ ವಿದ್ಯಾಭಾಸಕ್ಕೆ ತಕ್ಕಂತೆ ನೌಕರಿ ನೀಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಸರ್ಕಾರಿ ನೌಕರರು ಸೇವೆಯಲ್ಲಿರುವಾಗಲೇ ಮೃತಪಟ್ಟರೆ ಅವರ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 ಅನ್ನು ರಚಿಸಲಾಗಿದೆ.

ಆ) ಮತ್ತು ಇ) ನಿರ್ದಿಷ್ಟವಾಗಿ ಹೊರತುಪಡಿಸಲಾದ ಹುದ್ದೆಗಳನ್ನು ಬಿಟ್ಟು, ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳಿಗೆ ನೇಮಕಾತಿ ನೀಡಲು ಮಾತ್ರ ಸದರಿ ನಿಯಮಗಳಲ್ಲಿ ಅವ್ಸದವಿದೆ. ಅರ್ಜಿದಾರನು ಹೊಂದಿದ ವಿದ್ಯಾರ್ಹತೆಯನ್ನು ಅವಲಂಬಿಸಿ, ಅವನಿಗೆ ಅಂತಹ ಗ್ರೂಪ್ 'ಸಿ' ಅಥವಾ ಗ್ರೂಪ್ 'ಡಿ' ಹುದ್ದೆಗೆ ನೇಮಿಸಲಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರಿ ನೌಕರರು ಸೇವೆಯಲ್ಲಿರುವಾಗಲೇ ಮೃತಪಟ್ಟರೆ, ಅವರ ಪತ್ನಿಗೆ ಅಥವಾ ಮಕ್ಕಳಿಗೆ ಉದ್ಯೋಗ ಕೊಡುವ ದೃಷ್ಟಿಯಲ್ಲಿ 1996ನೇ ಇಸವಿಯಲ್ಲಿ ಒಂದು ನಿಯಮವನ್ನು ರಚನೆ ಮಾಡಿದ್ದಾರೆ. ಆದರೆ ಆ ನಿಯಮದ ಪ್ರಕಾರ ಮೃತಪಟ್ಟವರ ಮಕ್ಕಳು ತಾಂತ್ರಿಕ ಅಥವಾ ಇನ್ನು ಯಾವುದೇ ಡಿಪ್ಲೊಮಾ ಪದವಿ ಪಡೆದಿದ್ದರೂ ಕೂಡ ಅವರು ಕೇವಲ ಗುಮಾಸ್ತರು ಆಗುವಂಥ ಪರಿಸ್ಥಿತಿ ಬಂದಿದೆ. ಹೀಗಾಗಿ, 'ಸಿ' ಗ್ರೂಪ್‌ನಲ್ಲಿ ಕಿರಿಯ ಇಂಜಿನಿಯರ್ ಫಾರ್ಮಸಿಸ್ಟ್ ಪಡೆದಿರುವವರಿಗೆ ಅವರ ವಿದ್ಯೆಗೆ ತಕ್ಕ ಹಾಗೆ ಉದ್ಯೋಗ ಕೊಡುವುದಕ್ಕೆ ಸರ್ಕಾರ ಈಗಿರುವ ಕಾನೂನಿಗೆ ತಿದ್ದುಪಡಿ ಮಾಡುವುದಕ್ಕೆ ಸಾಧ್ಯವೇ?

ಅಧ್ಯಕ್ಷರು : 'ಡಿ' ಗ್ರೂಪ್ ಸರ್ವೆಂಟ್ ಇರುತ್ತಾರೆ. ಅವರು ಸರ್ವಿಸ್‌ನಲ್ಲಿದ್ದಾಗ ತೀರಿಕೊಂಡಿರುತ್ತಾರೆ. ಅವರ ಮಗ ಇಂಜಿನಿಯರ್ ಆಗಿರುತ್ತಾನೆ. ಆತನನ್ನು ಇಂಜಿನಿಯರ್ ಆಗಿ ತೆಗೆದುಕೊಳ್ಳಲಿಕ್ಕಾಗುತ್ತದೆಯೇ ಎಂಬುದಲ್ಲವೇ ತಮ್ಮ ಪ್ರಶ್ನೆ?

ಶ್ರೀ ಕೆ.ಎಸ್. ಈಶ್ವರಪ್ಪ : ಇಂಜಿನಿಯರಿಂಗ್ ಆಗಿದ್ದರೂ ಅಟೆಂಡರ್ ಆಗಬೇಕಾಗುತ್ತದೆ. ಎರಡನೆಯದಾಗಿ, ಕೆ.ಇ.ಬಿ. ಮತ್ತು ಕೆ.ಎಸ್.ಆರ್.ಟಿ.ಸಿ.ಯಂಥ ಬೋರ್ಡ್‌ಗಳಲ್ಲಿ ಈಗ ಹುದ್ದೆಗಳು ಖಾಲಿ ಇಲ್ಲದಿದ್ದರೆ, ಖಾಲಿಯಾದ ಮೇಲೆ ಕೊಡುತ್ತೇವೆಂದರೆ ಮುಕ್ಕಾಲುಪಾಲು ಅವರ ಮಕ್ಕಳು ಸತ್ತರೂ ಅವರಿಗೆ ಉದ್ಯೋಗ ಸಿಗುವುದಿಲ್ಲ. ಹುದ್ದೆ ಖಾಲಿಯಾಗುವುದೇ ಕಡಿಮೆ. ಬೋರ್ಡುಗಳಲ್ಲಿರುವ ನೌಕರರು ಮೃತಪಟ್ಟರೆ ಅವರ ಮಕ್ಕಳಿಗೆ ಬೇರೆ ಎಲ್ಲಾದರೂ ಉದ್ಯೋಗ ಕೊಡಿಸುವ ವ್ಯವಸ್ಥೆ ಮಾಡುತ್ತೀರಾ? ಮೂರನೆಯದಾಗಿ, ಸರ್ಕಾರಿ ನೌಕರರೆಂದರೆ ಗಂಡು, ಹೆಣ್ಣು ಮಕ್ಕಳೂ ಇಬ್ಬರೂ ಒಂದೇ. ಹೆಣ್ಣು ಮಕ್ಕಳು ಮೃತಪಟ್ಟರೆ ಅವರ ಮಕ್ಕಳಿಗೆ ಉದ್ಯೋಗ ಕೊಡುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಗಂಡ ಸತ್ತರೆ ಮಾತ್ರ ಉದ್ಯೋಗ ಕೊಡುತ್ತಾರೆ. ಹೆಣ್ಣು ಮಕ್ಕಳೂ ಮನುಷ್ಯರಲ್ಲವೇ? ಯಾರು ಸತ್ತರೂ ಒಂದೇ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅನುಕಂಪದ ಆಧಾರದ ಮೇಲೆ ನೌಕರಿ ಕೊಡುವಾಗ ಹೆಣ್ಣು, ಗಂಡು ಮಕ್ಕಳು ಒಂದೇ ಅಲ್ಲವೇ?

SMT. PRAMILA NESARGI : Art. 14 - discrimination by the Government itself?

ಶ್ರೀ ಎಂ.ಸಿ. ನಾಣಯ್ಯ : ಇವತ್ತಿನ ನಿಯಮಗಳ ಪ್ರಕಾರ, ಸುಪ್ರೀಂ ಕೋರ್ಟಿನ ಮಾರ್ಗಸೂಚಿಯ ಹಿನ್ನೆಲೆಯಲ್ಲಿ ನಾವು ನಿಯಮಗಳನ್ನು ರಚನೆ ಮಾಡಿದ್ದೇವೆ. ನಮ್ಮ ನಿಯಮಗಳು ಕೆ.ಎ.ಟಿ.ಯಲ್ಲಿ ರದ್ದಾದ ಮೇಲೆ, ಅದು ಸುಪ್ರೀಂ ಕೋರ್ಟಿಗೆ ಹೋದಮೇಲೆ, ಸುಪ್ರೀಂ ಕೋರ್ಟಿನವರು ಅನುಕಂಪದ ಆಧಾರದ ಮೇಲೆ ಯಾವ ರೀತಿ ಹುದ್ದೆಗಳನ್ನು ತುಂಬಬೇಕೆಂಬ ಬಗ್ಗೆ ಮಾರ್ಗಸೂಚಿಯನ್ನು ಮಾಡಿದ್ದಾರೆ. ಆದರಲ್ಲಿ ಸ್ಪಷ್ಟವಾಗಿ, ಅನುಕಂಪದ ಆಧಾರದ ಮೇಲೆ ಕೊಡುತ್ತಿರುವ ಹುದ್ದೆಗಳು as a matter of Rightಎಂದು ಕ್ಲೇಮ್ ಮಾಡಲಿಕ್ಕಾಗುವುದಿಲ್ಲ, it is a hereditary post to family ಎಂದು ಹೇಳುವುದು ಕೂಡದು, ನೀವು ಕೊಡಬೇಕಾಗಿರುವ ಹುದ್ದೆಗಳು ಇಮ್ಮೀಡಿಯಟ್ ಫೈನಾನ್ಷಿಯಲ್ ಡಿಸ್ಟ್ರೆಸ್ ಇದ್ದಾಗ ಮಾತ್ರ. ಅದಿಲ್ಲದಿದ್ದರೆ, you cannot give it. ಅವರ ಕ್ವಾಲಿಫಿಕೇಷನ್ ಎಂಬಿಬಿಎಸ್, ಬಿಟೆಕ್, ಬಿಇ ಇದ್ದರೆ ಅವರನ್ನು ಅದೇ ಹುದ್ದೆಗೆ ನೇಮಿಸಬೇಕೆಂದು ಹೇಳುವುದು ಕೂಡದು, ಯು ಕೆನಾಟ್ ಗೀವ್ ಇಟ್. ಕೊಡಬೇಕಾಗಿರುವುದು ಕ್ಯಾಟಗಿರಿ 'ಸಿ' ಮತ್ತು 'ಡಿ'ಗೆ ಮಾತ್ರ ಎಂಬುವ ಸಂಪೂರ್ಣವಾದ ಮಾರ್ಗಸೂಚಿಗಳನ್ನು ಕೊಟ್ಟಾದ ಮೇಲೆ, ಅದೇ ಹಿನ್ನೆಲೆಯಲ್ಲಿ ನಾವು ಅದಕ್ಕೆ ಮಾರ್ಗಸೂಚಿಗಳನ್ನು ರಚನೆ ಮಾಡಿದ್ದೇವೆ. ಆದ್ದರಿಂದ, ಒಬ್ಬ ಎಂಬಿಬಿಎಸ್ ಆಗಿದ್ದು, ಇನ್ನೊಬ್ಬ ಬಿಇ ಆಗಿದ್ದು, ನನಗೆ ಇಂಜಿನಿಯರ್ ಹುದ್ದೆಯನ್ನೇ ಕೊಡಬೇಕು, ಡಾಕ್ಟರ್ ಹುದ್ದೆಯನ್ನೇ ಕೊಡಬೇಕೆಂದು ಬಂದಾಗ, ಸರ್ಕಾರ ಕೊಡುತ್ತಿರುವ 'ಸಿ' ಮತ್ತು 'ಡಿ' ಕ್ಯಾಟಗರಿ ಹುದ್ದೆ ಅವನಿಗೆ ಬೇಡ, ಅದು ಬಿಲೋ ಹಿಸ್ ಡಿಗ್ನಿಟಿ ಎಂದೆನಿಸಿದರೆ, ಹಿ ಕ್ಯಾನ್ ರೆಫ್ಯೂಸ್ ದಟ್ ಎಂದು ಸುಪ್ರೀಂ ಕೋರ್ಟಿನವರು ಹೇಳಿದ್ದಾರೆ. ಅದಕ್ಕನುಗುಣವಾಗಿ ನಾವು ಮಾರ್ಗಸೂಚಿಗಳನ್ನು ರಚಿಸಿದ್ದೇವೆ. ಎರಡನೆಯದಾಗಿ, ಗಂಡ ಸತ್ತರೆ ಹೆಂಡತಿಗೆ ಅಥವಾ ಅವಲಂಬಿತರಿಗೆ ಕೆಲಸ ಕೊಡುವ ಬಗ್ಗೆ ಹೇಳುವುದಾದರೆ, ನಾವು ಅದಕ್ಕೆ ಈಗಾಗಲೇ ತಿದ್ದುಪಡಿ ಮಾಡಿದ್ದೇವೆ. ಹೆಂಡತಿ ಸತ್ತು, ಗಂಡ ಎಲ್ಲಾದರೂ ಕೆಲಸದಲ್ಲಿಲ್ಲದಿದ್ದರೆ, ಅವನಿಗೆ ಅರ್ಹತೆ ಇದ್ದರೆ, ಗಂಡನಿಗೆ ಕೆಲಸ ಕೊಡುವ ಹಾಗೆ ತಿದ್ದುಪಡಿ ಮಾಡಿದ್ದೇವೆ. ಏಕೆ ತಾರತಮ್ಯ ಮಾಡಬೇಕೆಂದು ಈ ತಿದ್ದುಪಡಿ ಮಾಡಿದ್ದೇವೆ. ಮೂರನೆಯದಾಗಿ, ಕೆಎಸ್ಆರ್‌ಟಿಸಿ ಮತ್ತು ಕೆಇಬಿಯಲ್ಲಿ ಕೆಲಸ ಮಾಡುವ ನೌಕರರ ಬಗ್ಗೆ ಹೇಳುವುದಾದರೆ, ಅನುಕಂಪದ ಆಧಾರದ ಮೇಲೆ ನೌಕರಿ ಕೊಡಬೇಕಾಗಿರುವುದು ಅವರ ಬೋರ್ಡಿನಲ್ಲಿ ಅವರು ಸರ್ಕಾರದ ನಿಯಮಗಳನ್ನು ನಾವು ಸಂಪೂರ್ಣವಾಗಿ ಅಡಾಪ್ಟ್ ಮಾಡಿಕೊಳ್ಳುತ್ತೇವೆಂದು ತೀರ್ಮಾನಿಸಿ, ಅವರಲ್ಲಿ ಹುದ್ದೆಗಳು ಖಾಲಿ ಇಲ್ಲದೇ ಹೋದರೆ, ಹೊಸ ಹುದ್ದೆಗಳನ್ನು ಸೃಷ್ಟಿ ಮಾಡಬೇಕಾಗಿದ್ದು, ಅದು ಆಯಾಯ ಬೋರ್ಡುಗಳಿಗೆ ಬಿಟ್ಟಿರುವ ವಿಚಾರ. ಆ ಸಂದರ್ಭದಲ್ಲಿ ಏನಾಗುತ್ತದೆಂದರೆ, ಕೆಲವು ಜನ ಸಾಯುತ್ತಾರೆ. ಕಡೆಗೆ ಅವರ ಮಕ್ಕಳಿಗೆ ಕೆಲಸ

ಕೊಡಬೇಕೆಂದರೆ ಹುದ್ದೆಗಳನ್ನು ಹೆಚ್ಚಿಚ್ಚು ಮಾಡಬೇಕಾಗುತ್ತದೆ. ಅವರು ಮಿತವ್ಯಯದ ಆಧಾರದ ಮೇಲೆ ಹುದ್ದೆಗಳು ಖಾಲಿ ಬಿದ್ದಾಗ ತುಂಬಬೇಕೆಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಅನುಕಂಪದ ಆಧಾರದ ನೌಕರಿ ಬಗ್ಗೆ ಅವರ ಬೋರ್ಡಿನಲ್ಲಿ ತೆಗೆದುಕೊಳ್ಳಬೇಕಾದ ತೀರ್ಮಾನವಿದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಗಂಡನಿಗೆ ಕೆಲಸ ಕೊಡಬಾರದೆಂದು ಹೇಳುವುದಿಲ್ಲ. ಆದರೆ ಡೆಸರ್ಟಿಟ್ ಹಸ್ಬೆಂಡ್ ಅಂಥವರಿಗೆ ಏನು ಮಾಡುತ್ತೀರಿ ? ಹೆಂಡತಿ ಮೊದಲೇ ಕೆಲಸದಲ್ಲಿರುವುದಿಲ್ಲ. ಇಂಥ ಸಂದರ್ಭದಲ್ಲಿ ಅವರ ಮಕ್ಕಳಿಗೆ ಕೆಲಸ ಕೊಡಬೇಕಾಗುತ್ತದೆಯೇ ಹೊರತು ಗಂಡಿನಿಗಲ್ಲ. ಇದಕ್ಕೇನಾದರೂ ರೂಲ್ಸ್ ಮಾಡುತ್ತೀರಲ್ಲಾ, ಆಗ ನೋಡಬೇಕಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ಡೆಸರ್ಟಿಟ್ ಹಸ್ಬೆಂಡ್ ಎಂದರೆ ಎಲ್ಲೋ ಒಂದು ಕಡೆ ಡೈವೋರ್ಸ್ ಆಗಿರಬೇಕಾಗುತ್ತದೆ. ಡೆಸರ್ಷನ್ ಎಂದು ಹೇಳಿ ಎಲ್ಲೋ ಇದ್ದು, ಹೆಂಡತಿಯನ್ನು ನಾನು ಕಟ್ಟಿಕೊಂಡಿದ್ದನೆ, ಬಿಟ್ಟಿದ್ದೇನೆಂದೂ ಹೇಳುವ ಹಾಗೂ ಇಲ್ಲ. If he is deserted husband, he should go to the Court and get a divorce. Automatically he will not get it then.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಅಪಾಯಿಂಟ್‌ಮೆಂಟ್ ಬಗ್ಗೆ ಹೇಳುತ್ತಿದ್ದೇನೆ. ಡೈವೋರ್ಸ್ ತೆಗೆದುಕೊಳ್ಳುವ ಬಗ್ಗೆ ನನಗೆ ಗೊತ್ತಿದೆ. ಅಪಾಯಿಂಟ್‌ಮೆಂಟ್ ಕೊಡುವ ಸಂದರ್ಭದಲ್ಲಿ ಆಕೆಯ ಮಕ್ಕಳಿಗೆ ಕೊಡಬೇಕು. ಅದರ ಬಗ್ಗೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಅವರು ಹೇಳಿದ್ದು ಅರ್ಥವಾಗಿಯೂ ಕೂಡ ಸುಮ್ಮನೆ ಹಾಗೆಲ್ಲಾ ಮಾತನಾಡಬಾರದು. Compassion, when the husband has deserted and he is not taking care of the family, deserving children are there. They have become orphans, compassion should go to the children.

ಶ್ರೀ ಕೆ.ಎಸ್. ಈಶ್ವರಪ್ಪ : ಈ ತರಹದ ವಿಚಾರ ಅವರಿಗೆ ಗೊತ್ತಾಗುವುದಿಲ್ಲ.

SRI M.C. NANAIAH : The question of proving of desertion.

MR. SEPAKER : Please be compassionate, I have to conduct the Question Hour.

SRI M.C. NANAIAH : Right Sir, I will be too compassionate to appoint.

MR. SEPAEKR : Compassion will be extended to those who deserve it.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅನುಕಂಪದ ಆಧಾರದ ಮೇಲೆ ಸರ್ಕಾರಿ ನೌಕರಿ ನೀಡುವ ಸಂದರ್ಭದಲ್ಲಿ 'ಸಿ' ಮತ್ತು 'ಡಿ' ದರ್ಜೆಯ ನೌಕರರು ಕಡ್ಡಾಯವಾಗಿ ಕನ್ನಡವನ್ನು ಕಲಿತಿರಬೇಕು, ಇಲ್ಲದಿದ್ದರೆ ಅವರಿಗೆ ಕೆಲಸ ಕೊಡುವುದಿಲ್ಲವೆಂದು ಸರ್ಕಾರ ಹೇಳುತ್ತದೆ. ಇದು ನ್ಯಾಯಯುತವಾದ ನಿರ್ಣಯವೇ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಅಧ್ಯಕ್ಷರು : ಕನ್ನಡವಲ್ಲದೆ ಕರ್ನಾಟಕದಲ್ಲಿ ಅವರಿಗೆ ಇನ್ನೇನು ಗೊತ್ತಿರಬೇಕು?

ಶ್ರೀ ಸಿ.ಆರ್ ಸಗೀರ್ ಅಹಮದ್ : ಹಿಂದೆ 2 ವರ್ಷಗಳ ಕಾಲ ಕನ್ನಡ ಕಲಿಯುವುದಕ್ಕೆ ಅವಕಾಶ ಕೊಡುತ್ತಿದ್ದರು. ಆ ದೃಷ್ಟಿಯಿಂದ ಅನುಕಂಪದ ಆಧಾರದ ಮೇಲೆ ನೌಕರಿ ನೀಡುವಾಗ, ವ್ಯಕ್ತಿಗಳಿಗೆ ಬಗ್ಗೆ ಸರ್ಕಾರ ಸಹಾನುಭೂತಿಯ ವರ್ತನೆಯಲ್ಲಿ ನಡೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರನ್ನು ಕೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಬೋರ್ಡ್‌ಗಳ ಬಗ್ಗೆ ಕ್ಲಾರಿಫೈ ಮಾಡಬೇಕು. ಬೋರ್ಡ್‌ನಲ್ಲಿ ಖಾಲಿಯಾದ ಮೇಲೆ ಕೊಡುತ್ತೇವೆಂದರೆ, 10-20 ವರ್ಷಗಳ ಉದಾಹರಣೆಗಳು ನನ್ನಲ್ಲಿವೆ. ಆಕಸ್ಮಾತ್ ಆ ಬೋರ್ಡಿನಲ್ಲಿ ಹುದ್ದೆ ಖಾಲಿಯಾಗಲಿಲ್ಲವೆಂದರೆ, ಬೇರೆ ಇಲಾಖೆಗಳಲ್ಲಿ ಉದ್ಯೋಗವನ್ನು ಕೊಡಿಸುವ ಪ್ರಯತ್ನ ಮಾಡಿದರೆ ಒಳ್ಳೆಯದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : 'ಸಿ' ಮತ್ತು 'ಡಿ' ಗ್ರೂಪ್ ನೌಕರರಿಗೆ ಅನುಕಂಪದ ಆಧಾರದ ಮೇಲೆ ಕೆಲಸ ಕೊಡಬೇಕೆಂದು ಸುಪ್ರೀಂಕೋರ್ಟ್ ಏನು ಆದೇಶ ಮಾಡಿದೆ, ಅದಕ್ಕೇನಾದರೂ ಕಾಲಮಿತಿ ಏನಾದರೂ ನಿಗದಿ ಮಾಡಿದೆಯೇ? ಏಕೆಂದರೆ, 15 ವರ್ಷ ಬಿಟ್ಟುಕೊಂಡು ಅನುಕಂಪದ ಆಧಾರದ ಮೇಲೆ ಕೆಲಸ ಕೊಡುತ್ತೇವೆಂದರೆ ಹೇಗೆ? ಆ ಕ್ಯಾಟಗರಿ ಹುದ್ದೆ ಖಾಲಿಯಾದ ಮೇಲೆ ಕೊಡಬೇಕೆಂಬ ತೀರ್ಮಾನವೇ? ಆದ್ದರಿಂದ, ದುಡಿಯುವ ವ್ಯಕ್ತಿ ಸತ್ತಮೇಲೆ, ಆ ಕುಟುಂಬದವರಲೊಲ್ಲಬ್ಬರಿಗೆ ಅವರ ವಿದ್ಯಾರ್ಹತೆ ಆಧಾರದ ಮೇಲೆ ಕೊಡುವ ಕೆಲಸವನ್ನು ಕನಿಷ್ಠ ಕಾಲಮಿತಿಯಲ್ಲಿ ಮಾಡಬೇಕು ಮತ್ತು ಎಲ್ಲಾ ಮಂಡಳಿಗಳಲ್ಲೂ ತುಂಬುವ ಕೆಲಸವಾಗಬೇಕು. ಇಂಜಿನಿಯರಿಂಗ್ ಇಲಾಖೆಯಲ್ಲಿ ಸತ್ತರೆ ಅಲ್ಲೇ ಎಂದು ಹೇಳಬಾರದು. ಎಲ್ಲಾದರೂ ಆಗಲಿ, ಖಾಲಿ ಇರುವ ಹುದ್ದೆಯನ್ನು ಅನುಕಂಪದ ಆಧಾರದ ಮೇಲೆ ತುಂಬಬೇಕು.

ಶ್ರೀ ಎಂ. ಸಿ. ನಾಣಯ್ಯ : ಇದರ ಬಗ್ಗೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಮಾರ್ಗಸೂಚಿಗಳನ್ನು ಈಗಾಗಲೇ ಅಳವಡಿಸಿಕೊಂಡು, ನಿಯಮಗಳು ಜಾರಿಗೆ ಬರುತ್ತಿವೆ. ಕನಿಷ್ಠಪಕ್ಷ 6 ತಿಂಗಳೊಳಗಾಗಿ ಅನುಕಂಪದ ಮೇಲಿನ ಹುದ್ದೆಗಳನ್ನು ತುಂಬಬೇಕೆಂದು ಎಲ್ಲಾ ಇಲಾಖೆಗಳಿಗೆ ಸುಸ್ತೋಲೆಗಳನ್ನು ಕಳುಹಿಸಲಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಬಹಳ ವರ್ಷಗಳಿಂದ ಇರುವ ಸಮಸ್ಯೆ. ಕೆ.ಇ.ಬಿ. ಮತ್ತು ಕೆಎಸ್ಆರ್‌ಟಿಸಿಗಳಂಥ ಬೋರ್ಡುಗಳಲ್ಲಿ ಒಂದು ಬೋರ್ಡಿನಿಂದ ಇನ್ನೊಂದು ಬೋರ್ಡಿಗೆ ಬರುವ ವ್ಯವಸ್ಥೆ ಮಾಡಿಸಿ.

ಅಧ್ಯಕ್ಷರು : ಪಾಲಿಸಿ ಮ್ಯಾಟರ್ ಇಲ್ಲವೆಂದು ಹೇಳಿದ್ದಾರಲ್ಲಾ.

ಅಧ್ಯಕ್ಷರು : ಹೇಮಾವತಿಯವರೆ, ನೀವು ಅಪರೂಪಕ್ಕೆ ಕೇಳಿರುವ ಪ್ರಶ್ನೆಗೆ ಸರ್ಕಾರ ಸಮಯ ಕೇಳಿದೆ. ಅವರು ಉತ್ತರ ಕೊಟ್ಟ ಮೇಲೆ ನಂತರ ಹಾಕಿಸಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಹಿಳೆಯವರ ಬಗ್ಗೆ ಕರುಣೆ ಇಲ್ಲ ಎನ್ನುವುದಕ್ಕೆ ಇದೊಂದೇ ಸಾಕ್ಷಿಯಲ್ಲವೇ?

ಅಧ್ಯಕ್ಷರು : ಮಾನ್ಯ ತಿಪ್ಪೇಸ್ವಾಮಿ ಯವರು ರಜೆ ಹೋಗಿದ್ದಾರೆ ಅವರ ಬದಲು ಯಾರು ಇಲ್ಲಿ ಉತ್ತರಿಸುತ್ತೀರಿ?

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಚಿಮ್ಮನಕಟ್ಟಿಯವರು, ಪ್ರಶ್ನೆ ಯಾರು ಕೇಳುತ್ತಾರೆ.

ಅಧ್ಯಕ್ಷರು: ಚಿಮ್ಮನಕಟ್ಟಿಯವರು ಇಲ್ಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹೇಮಾವತಿಯವರ ಪ್ರಶ್ನೆಗೆ ಉತ್ತರಿಸುವವರು ಮಾನ್ಯ ಅನಂತನಾಗ್‌ರವರು.

ಅಧ್ಯಕ್ಷರು : ನಾಗೇಗೌಡರೇ, ನೀವು ಈ ಸದನದಲ್ಲಿಲ್ಲ. ಅದಕ್ಕೆ ನಾನು ನಿಮಗೆ ಗುಡ್ ಮಾರ್ನಿಂಗ್ ಗುಡ್‌ಆಫ್ಟರ್‌ನೂನ್ ಹೇಳುವ ವಿಚಾರವನ್ನು ಹೇಳಿದ್ದು. ಮಾನ್ಯ ಸದಸ್ಯರಾದ ಬಸವನಗೌಡ ರಾ. ಪಾಟೀಲ್ ರವರ ಪ್ರಶ್ನೆಗೆ ಉತ್ತರಿಸಿ.

ಶ್ರೀ ಕೆ.ಎನ್. ನಾಗೇಗೌಡ : ಐಯಾಮ್ ಸಾರಿ ಸರ್. ಉತ್ತರವನ್ನು ಒದಗಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸಾರ್ ನೀವು ನನ್ನ ಕಡೆಗೆ ಗಮನವನ್ನೇ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಆ ಕಡೆ ಇರುವವರೆಲ್ಲರೂ ನಿಮ್ಮ ಕಡೆನೇ ಗಮನ ಕೊಡುತ್ತಾರೆಂದು ಹೇಳುತ್ತಾರೆ. ಹೊರಗಡೆ ಎಲ್ಲಾ ಇದರ ಬಗ್ಗೆ ಮಾತನಾಡಿಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಹಾಗೆನ್ನುವುದಿಲ್ಲ. ಇದು ಸತ್ಯಕ್ಕೆ ದೂರವಾದುದು.

ಅಧ್ಯಕ್ಷರು : ನಂತರ ಬನ್ನಿ ನಿಮಗೆ ಬೇಕಾದರೆ ಸಾಕ್ಷಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಈಗ ಹೇಮಾವತಿಯವರ ಪ್ರಶ್ನೆಗೆ ಸರ್ಕಾರ ಸಮಯ ಕೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಸಮಯ ಕೇಳಿರುವವರು ಯಾರು, ಯಾವ ಮಂತ್ರಿಗಳು ಸಮಯ ಕೇಳಿದ್ದಾರೆ?

ಅಧ್ಯಕ್ಷರು : ಮಾನ್ಯ ಅನಂತನಾಗ್‌ರವರು ಸಮಯ ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೂ ಸಮಯ ಕೇಳುತ್ತಾರೆ. ಮಾನ್ಯ ಸದಸ್ಯರ ಪ್ರಶ್ನೆಗೂ ಸಮಯ ಕೇಳುತ್ತಾರೆ. ಇದಕ್ಕೇನು ಕಾರಣ?

ಅಧ್ಯಕ್ಷರು : ಕಾರಣ ಏನೆಂದರೆ ನಾನು ಹೇಗೆ ಹೇಳುವುದು.

ಶ್ರೀ ವಾಟಾಳ್ ನಾಗರಾಜ್ : ಸಾರ್ ತಾವು ಅಧ್ಯಕ್ಷರು. ನಾನು ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದ್ದೆ. ಅದಕ್ಕೂ ಹದಿನೈದು ದಿವಸಗಳ ಕಾಲಾವಕಾಶ ಬೇಕೆಂದು ಹೇಳುತ್ತಾರೆ. ಮಾನ್ಯ ಸದಸ್ಯರ ಪ್ರಶ್ನೆಗೂ ಕಾಲವಕಾಶ ಬೇಕೆನ್ನುತ್ತಾರೆ. ಇವರು ಏನು ಕಾರಣಕ್ಕೋಸ್ಕರ ಕಾಲಾವಕಾಶ ಕೇಳುತ್ತಾರೆ?

ಅಧ್ಯಕ್ಷರು : ಈಗ ಪ್ರಶ್ನೋತ್ತರ ಮುಗಿದು ಬಿಡಲಿ, ನಂತರ ನೋಡೋಣ.

ವಿಜಾಪುರ ಜಿಲ್ಲೆಯ ಇಂಡಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕಡಣಿ ಬ್ಯಾಂರೇಜ್ ಯೋಜನೆಯ ಮಂಜೂರಾತಿ

288 - ಶ್ರೀ ಬಸವನಗೌಡ. ರಾ. ಪಾಟೀಲ್ (ವಿಜಾಪುರ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಜಾಪುರ ಜಿಲ್ಲೆಯ ಇಂಡಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕದಣಿ ಬ್ಯಾರೇಜ್ ರೈತರಿಗೆ ಉಪಯೋಗವಾಗದೇ ಹಲವಾರು ವರ್ಷಗಳಿಂದ ಸಾವಿರಾರು ಎಕರೆ ಜಮೀನಿಗೆ ನೀರು ಬರದೇ ಇದ್ದು ನಿರುಪಯುಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಕೋಟ್ಯಾಂತರ ಹಣ ವಿನಿಯೋಗಿಸಿ ಕೆಲವೇ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಲ್ಲಿ ರೈತರ ಭೂಮಿಗೆ ನೀರು ಬರುವ ಯೋಜನೆಗೆ ತಾತ್ಸಾರ ಮಾಡಿರುವುದೇಕೆ? (ವಿವರ ನೀಡುವುದು)*

ಇ) *ಸರ್ಕಾರ ಇದರ ಬಗ್ಗೆ ಕೈಗೊಂಡಿರುವ ನಿರ್ದಿಷ್ಟ ಕ್ರಮಗಳೇನು, ಎಂದು ನೀರು ಶೇಖರಿಸಿ ನೀರಾವರಿಗೆ ಉಪಯೋಗ ಮಾಡಲು ಕ್ರಮ ಕೈಗೊಳ್ಳಲಾಗುವುದು?*

ಶ್ರೀ ತಿಪ್ಪೇಸ್ವಾಮೀ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಈ ಕಾಮಗಾರಿಯನ್ನು 1976ರಲ್ಲಿ ಕರ್ನಾಟಕ ಭೂಸೇನಾ ನಿಗಮದಿಂದ ಡಿ.ಪಿ.ಎ.ಪಿ ಯೋಜನೆ ಯಡಿಯಲ್ಲಿ ಕೈಗೊಂಡು 1981 ರಲ್ಲಿ ಪೂರ್ಣ ಗೊಳಿಸಲಾಗಿತ್ತು. 1981ರಲ್ಲಿ ಭಾರಿ ಮಳೆಯಿಂದ ಉಂಟಾದ ಪ್ರವಾಹದಿಂದ ಬ್ಯಾರೇಜಿನ ಎಡಭಾಗದಲ್ಲಿ 50 ಮೀ. ನಷ್ಟು ಕೊಚ್ಚಿ ಹೋಗಿರುವ ನದಿ ದಂಡೆಯ ದುರಸ್ತಿ ಕಾರ್ಯಕೈಗೊಳ್ಳಬೇಕಾಗಿದ್ದು ಈ ಕಾಮಗಾರಿಯನ್ನು 1997ರ ಜೂನ್ ತಿಂಗಳಲ್ಲಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಿಕೊಳ್ಳಲಾಗಿದೆ. ಈಗ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ ಗುತ್ತಿಗೆದಾರರಿಗೆ ಎರಡು ವರ್ಷಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿ ನಿಗದಿಪಡಿಸಿ ವಹಿಸಲಾಗಿದೆ. ಕಾಮಗಾರಿ ಪೂರ್ಣಗೊಂಡ ನಂತರ ನೀರು ಶೇಖರಿಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಶ್ರೀ ಬಸವನಗೌಡ ರಾ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬ್ಯಾರೇಜ್ ಬಗ್ಗೆ ಪ್ರಶ್ನೆ ಕೇಳಿದ್ದೆ. 1976ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಿದರು. ಬಹುಶ: ಆ ಭಾಗದ ರೈತರ ದುರಂತ ಎಂದು ಕಾಣುತ್ತದೆ, ಈ ಯೋಜನೆ ಮುಗಿದಿದ್ದು 1981 ರಲ್ಲಿ. ಹೀಗಾದರೂ ಒಂದು ಹನಿ ನೀರನ್ನು ನೀರಾವರಿ ಯೋಜನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. 1981ರಲ್ಲಿ ಈ ಬ್ಯಾರೇಜ್ ಒಡೆದ ನಂತರ ಇದನ್ನು 1997ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಿ, ಗುತ್ತಿಗೆದಾರರಿಗೆ ಗುತ್ತಿಗೆ ಕೊಟ್ಟಿದ್ದಾರೆ. ಗುತ್ತಿಗೆದಾರರು ಅತ್ಯಂತ ಕಡಿಮೆ ಕೆಳಗೆ ಬಂದು ಗುತ್ತಿಗೆ ತೆಗೆದುಕೊಂಡಿದ್ದಾರೆ ಹಾಗೂ ಎರಡು